ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಸಂಖ್ಯೆ 183ಕ್ಕೆ ಅನುಬಂಧ

ಕ್ರ ಸಂ	ಯೋಜನೆ	2004–05 ಆರ್ಥಿಕ		2005–06 ಆರ್ಥಿಕ	
		ಗುರಿ	ಸಾಧನೆ	ಗುರಿ	ಸಾಧನೆ
1	ಸ್ವಾವಲಂಬನಾ ಸಾಲದ ಯೋಜನೆ	5 78	5 04	4 04	5 30
2	ಗಂಗಾ ಕಲ್ಯಾಣ	18 10	10 32	0 70	1 30
3	ಅರಿವು	0 70	–	0 70	1 30
4	ನೇರ ಸಾಲ ಯೋಜನೆ	14 15	–	12 50	1 14
5	ಶ್ರಮಶಕ್ತಿ ಯೋಜನೆ	–	–	1 15	0 95

68 (217) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ) (ವಿಧಾನಸಭೆ ಸದಸ್ಯರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ AIDS-HIV-1, HIV-2 ರೋಗಗಳಿಂದ ನರಳುತ್ತಿರುವವರ ಸಂಖ್ಯೆ ಎಷ್ಟು? ರಾಜ್ಯ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ರೋಗಿಗಳು ಇದರಿಂದ ನರಳುತ್ತಿದ್ದಾರೆ,

ಆ) ಇವರುಗಳಿಗೆ ಯೋಗ್ಯ ಚಿಕಿತ್ಸೆ ನೀಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು ,

ಇ) ಈ ರೋಗ ಚಿಕಿತ್ಸೆಗಾಗಿ ವಿಶ್ವಬ್ಯಾಂಕ್, ಕೇಂದ್ರ ಸರ್ಕಾರ ಹಾಗೂ ಇತರೆ ಮೂಲಗಳಿಂದ ಸರ್ಕಾರಕ್ಕೆ ಬರುತ್ತಿರುವ ಹಣವೆಷ್ಟು , ಇದನ್ನು ಯಾವ ರೀತಿ ಸರ್ಕಾರವು ಬಳಸಿಕೊಳ್ಳುತ್ತಿದೆ,

ಈ) ರಾಜ್ಯದಲ್ಲಿ AIDS-HIV-1, HIV-2 ರೋಗಗಳಿಂದ ಮೃತಪಟ್ಟ ರೋಗಿಗಳ ಕುಟುಂಬದವರಿಗೆ ಪುನರ್ ವಸತಿಗಾಗಿ ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮವೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ 1987 ರಿಂದ ನವೆಂಬರ್ 2006ರ ವರೆಗೆ ಏಡ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ 10,589 ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ

ಆ) ಈ ಬಗ್ಗೆ ವಿವರವನ್ನು ಲಗತ್ತಿಸಲಾಗಿದೆ

ಇ) ಈ ರೋಗ ಚಿಕಿತ್ಸೆಗಾಗಿ 2006–07 ಸಾಲಿನಲ್ಲಿ ನಿಗದಿಪಡಿಸಿರುವ ಅನುದಾನಗಳು

1	ವಿಶ್ವಬ್ಯಾಂಕ್	– ರೂ 2777 22 ಲಕ್ಷಗಳು
2	ಜಿ ಎಫ್ ಎ ಟಿ ಎಮ್	– ರೂ 1986 90 ಲಕ್ಷಗಳು

ಈ ಹಣವನ್ನು ಈ ಕೆಳಕಂಡ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುತ್ತಿದೆ

ಸಾರ್ವಜನಿಕರಿಗೆ ಈ ಕೆಳಕಂಡ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುತ್ತಿದೆ

1 ಸಾರ್ವಜನಿಕರಿಗ ಮಾಹಿತಿ, ಶಿಕ್ಷಣ ಮತ್ತು ಸಮಾಚಾರ

2 ಆಪ್ತ ಸಮಾಲೋಚನಾ ಕೇಂದ್ರಗಳ (VCTC) ಮತ್ತು ಸಂಯುಕ್ತ ಕೇಂದ್ರಗಳ ಮೂಲಕ ಆಪ್ತ ಸಮಾಲೋಚನೆ ಮತ್ತು ಹೆಚ್ ಐ ವಿ /ಏಡ್ಸ್ ರಕ್ತ ಪರೀಕ್ಷೆ

3 ಪಿ ಪಿ ಟಿ ಸಿ ಟಿ ಕೇಂದ್ರಗಳಲ್ಲಿ ಗರ್ಭಿಣಿ ಸ್ತ್ರೀಯರೊಂದಿಗೆ ಆಪ್ತ ಸಮಾಲೋಚನೆ ಹಾಗೂ ಗರ್ಭಿಣಿ ತಾಯಿಯಿಂದ ಮಗುವಿಗೆ ಹೆಚ್ ಐ ವಿ ಸೋಂಕು ತಗಲುವುದನ್ನು ನಿಯಂತ್ರಿಸುವುದು

4 ಸರ್ಕಾರೇತರ ಸಂಸ್ಥೆಗಳ ಮೂಲಕ ಲೈಂಗಿಕ ಕಾರ್ಯಕರ್ತೆಯರು, ಸಲಿಂಗಕಾಮಿ ಪುರಷರು, ಟ್ರಕರ್ಸ್ ಮುಂತಾದ ಹೆಚ್ಚು ಅಪಾಯದಲ್ಲಿರುವ ಸಮುದಾಯಗಳಿಗೆ ಉದ್ದೇಶಿತ ಕಾರ್ಯಕ್ರಮ (Targetted Interventions)

5 ಶಾಲಾ ಮತ್ತು ಕಾಲೇಜಿನ ವಿದ್ಯಾರ್ಥಿಗಳಲ್ಲಿ ಹೆಚ್ ಐ ವಿ /ಏಡ್ಸ್ ಬಗ್ಗೆ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮಗಳು

6 ಆರೈಕೆ ಮತ್ತು ಬೆಂಬಲ ಕೇಂದ್ರಗಳ ಮೂಲಕ ಏಡ್ಸ್ ಪೀಡಿತರಿಗೆ ಆರೈಕೆ ಮತ್ತು ಬೆಂಬಲ ಸೇವೆಗಳನ್ನು ನೀಡುವುದು

7 ರಕ್ತ ಸುರಕ್ಷತೆಗೆ ಒತ್ತು ನೀಡುವುದು

8 ರಾಜ್ಯದ ಆಸ್ಪತ್ರೆಗಳಲ್ಲಿ ಏಡ್ಸ್ ಪೀಡಿತ ಜನರಿಗೆ ಆಂಟಿ ರಿಟ್ರೋವೈರಲ್ ಚಿಕಿತ್ಸೆ ನೀಡುವುದು

ಈ) ಪ್ರಸ್ತುತ ರಾಜ್ಯದಲ್ಲಿ AIDS-HIV-1, HIV-2 ರೋಗಗಳಿಂದ ಮೃತಪಟ್ಟ ರೋಗಿಗಳ ಕುಟುಂಬದವರಿಗೆ ಪುನರ್ ವಸತಿಗಾಗಿ ಸರ್ಕಾರವು ಯಾವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ ಈ ಬಗ್ಗೆ ಚಿಂತನೆ ನಡೆಸಿ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಹಾಗೂ ಈ ಕಾರ್ಯಕ್ರಮಗಳನ್ನು ಬಡತನ ರೇಖೆಗಿಂತ ಕಡಿಮೆ ಇರುವ ರೋಗಿಗಳಿಗೂ ಅನ್ವಯಿಸುತ್ತದೆ

ಏಡ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಗಳು	1987ರಿಂದ ನವೆಂಬರ್ 2006ರವರೆಗೆ ಏಡ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ
	ಬೆಂಗಳೂರು ವಿಭಾಗ	
1	ಬೆಂಗಳೂರು (ನಗರ)	1483
2	ಬೆಂಗಳೂರು (ಗ್ರಾಮಾಂತರ)	84
3	ತುಮಕೂರು	104
4	ಶಿವಮೊಗ್ಗ	152
5	ಚಿತ್ರದುರ್ಗ	42
6	ದಾವಣಗೆರೆ	1010
7	ಕೋಲಾರ	68
	ಮೈಸೂರು ವಿಭಾಗ	
8	ಮೈಸೂರ	269
9	ಚಾಮರಾಜನಗರ	10
10	ಮಂಡ್ಯ	162
11	ಮಂಗಳೂರು	1679
12	ಉಡುಪಿ	1804
13	ಮಡಿಕೇರಿ	10
14	ಚಿಕ್ಕಮಗಳೂರು	101
15	ಹಾಸನ	30
	ಬೆಳಗಾಂ ವಿಭಾಗ	
16	ಬೆಳಗಾಂ	1620
17	ಬಿಜಾಪುರ	20
18	ಬಾಗಲಕೋಟೆ	48
19	ಧಾರವಾಡ	662
20	ಹಾವೇರಿ	73
21	ಗದಗ್	63
22	ಕಾರವಾರ	158
	ಗುಲ್ಬರ್ಗಾ ವಿಭಾಗ	
23	ಗುಲ್ಬರ್ಗಾ	495

ಕ್ರಮ ಸಂಖ್ಯೆ	ಜಿಲ್ಲೆಗಳು	1987ರಿಂದ ನವೆಂಬರ್ 2006ರವರೆಗೆ ಏಡ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ
24	ರಾಯಚೂರು	62
25	ಬೀದರ್	17
26	ಬಳ್ಳಾರಿ	321
27	ಕೊಪ್ಪಲ	42
	ಒಟ್ಟು	**10589**

ಎ ಆರ್ ಟಿ ಕೇಂದ್ರಗಳ ಪಟ್ಟಿ

1 ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ
ಶಿವಾಜಿನಗರ, ಬೆಂಗಳೂರು

2 ಕೆಂಪೇಗೌಡ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್
ಎಆರ್‌ಟಿ ಕೇಂದ್ರ (ಒಪಿಡಿ ಬ್ಲಾಕ್)
ವಿದ್ಯಾನಗರ, ಹುಬ್ಬಳ್ಳಿ

3 ಕೆ ಆರ್ ಆಸ್ಪತ್ರೆ
ಇರವಿನ್ ರೋಡ್, ಮೈಸೂರು (0821–2423400)

4 ವಿಮ್ಸ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ
ಕಂಟೋನ್‌ಮೆಂಟ್, ಬಳ್ಳಾರಿ (08392–235224)

5 ಜಿಲ್ಲಾ ಆಸ್ಪತ್ರೆ,
ಸೀರುಮ್ ರೋಡ್
ಗುಲ್ಬರ್ಗ (08472–240630)

6 ಜಿಲ್ಲಾ ಆಸ್ಪತ್ರೆ,
ಹೈದರಾಬಾದ್ ರೋಡ್
ರಾಯ್‌ಚೂರ್ ಪೋಸ್ಟ್
ರಾಯ್‌ಚೂರ್ (08532–235855, 235801)

7 ಜಿಲ್ಲಾ ಆಸ್ಪತ್ರೆ
ಬಿಜಾಪುರ (08352–27009)

8 ಜಿಲ್ಲಾ ಆಸ್ಪತ್ರೆ
ಬೆಳಗಾವಿ (0831–2420320)

9 ಜಿಲ್ಲಾ ಆಸ್ಪತ್ರೆ
ಬಾಗಲಕೋಟೆ (08354–236260)

10 ಜಿಲ್ಲಾ ಆಸ್ಪತ್ರೆ
ದಾವಣಗೆರೆ (08192–221585)

11 ಎನ್ ಎನ್ ಆರ್ ಜಿಲ್ಲಾ ಆಸ್ಪತ್ರೆ
ಕೋಲಾರ (08152–222035)

12 ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ
ಮಂಗಳೂರು (ದ ಕ) (ಫೊ 0824–2425138)

ಏಡ್ಸ್ ಕಾಯಿಲೆಯನ್ನು ತಡೆಗಟ್ಟಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿ

- ರಾಜ್ಯದಲ್ಲಿ HIV/AIDS ತಡೆಗಟ್ಟು ನಿಟ್ಟಿನಲ್ಲಿ ಸರ್ಕಾರ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿಯ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಮೊದಲಿನಿಂದ ಹಮ್ಮಿಕೊಂಡಿದೆ KSAPS ಜೊತೆಗೆ ಹಲವು ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರೆ ಇಲಾಖೆಗಳು ಒಗ್ಗೂಡಿ HIV/AIDS ನಿಯಂತ್ರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ
- ಸುಮಾರು 95 ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ)ಗಳು ಪಿಪಿಟಿಸಿಟಿ, ಉದ್ದೇಶಿತ ಕಾರ್ಯಕ್ರಮ (Targeted intervenions) ಹಾಗೂ ದೂರವಾಣಿ ಸಮಾಲೋಚನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಹಭಾಗಿಗಳಾಗಿದ್ದಾರೆ ಇವರು ಸೇವೆಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಇವರ ಸೇವೆಗಳನ್ನು ಬಳಸಿಕೊಳ್ಳಲಾಗುವುದು
- ಹೆಚ್‌ಐವಿ ತಡೆಗಟ್ಟುವ ನಿಟ್ಟಿನಲ್ಲಿ ವಿಶ್ವಬ್ಯಾಂಕ್, UNAIDS, USAID, ಬಿಲ್‌ಗೇಟ್, ಕ್ಲಿಂಟನ್ ಫೌಂಡೇಷನ್ ಹಾಗೂ ಇತರೆ ಸಂಸ್ಥೆಗಳೂ ಸಹ ಸಹಕಾರ ನೀಡುತ್ತಿದ್ದಾರೆ
- ಈ ಕಾರ್ಯಕ್ರಮ ಯಶಸ್ಸು ಕಾಣಲು ಸೇವಾ ಸೌಲಭ್ಯಗಳನ್ನು ಹೆಚ್ಚಿಸಬೇಕಾಗಿದೆ ಈ ನಿಟ್ಟಿನಲ್ಲಿ ನಿಯಂತ್ರಣ ಕ್ರಮಗಳಾಗಿ ಈಗಾಗಲೇ ವಿಸಿಟಿಸಿ 61 ಕೇಂದ್ರಗಳು, ಸೋಂಕಿತ ತಾಯಿಯಿಂದ ಮಗುವಿಗೆ ಹೆಚ್‌ಐವಿ ಸೋಂಕು ತಡೆಗಟ್ಟಲು ಪಿಪಿಟಿಸಿಟಿ 82 ಕೇಂದ್ರಗಳು, ಸಂಯುಕ್ತ ವಿಸಿಟಿಸಿ/ ಪಿಪಿಟಿಸಿಟಿ 194 ಕೇಂದ್ರಗಳು, ಲೈಂಗಿಕ ಸಂಪರ್ಕ ಸೋಂಕನ್ನು ತಡೆಗಟ್ಟಲು ಎಸ್ ಟಿ ಡಿ 206 ಕ್ಲಿನಿಕ್‌ಗಳು, ಸೋಂಕಿತರ ಬೆಂಬಲ ಹಾಗೂ ಆರೈಕೆ

ಮಾಡಲು ಎ ಆರ್ ಟಿ 12 ಕೇಂದ್ರಗಳು ಹಾಗೂ ಹೆಚ್ ಐ ವಿ /ಟಿಬಿ 33 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಇವುಗಳನ್ನು ಜಿಲ್ಲಾ ಮಟ್ಟದಲ್ಲಿ ಮಾತ್ರವಲ್ಲದೇ ಸಿಹೆಚ್‌ಸಿ ಹಾಗೂ ಪಿಹೆಚ್‌ಸಿ ಮಟ್ಟಕ್ಕೂ ವಿಸ್ತರಿಸಲಾಗಿದೆ

- ಹಾಗೆಯೇ ಪೋಲಿನ್ ಸಿಬ್ಬಂದಿಗೆ, ಅಂಗನವಾಡಿ ಕಾರ್ಯಕರ್ತರಿಗೆ, ವೈದ್ಯರಿಗೆ, ದಾದಿಯರಿಗೆ ವಿವಿಧ ಮಟ್ಟದಲ್ಲಿ ತರಬೇತಿಗಳನ್ನು ನೀಡಲಾಗುತ್ತಿದೆ
- HIV/AIDS ಬಾದಿತರ ಆರೈಕೆ, ಜೀವನಮಟ್ಟ ಸುಧಾರಿಸಲು ಹಾಗೂ ಅವರ ಜೀವಿತದ ಅವಧಿ ಹೆಚ್ಚಿಸುವುದಕ್ಕಾಗಿ ಕಳೆದ ಆಗಸ್ಟ್‌ನಲ್ಲಿ 8 ನೂತನ ಎ ಆರ್ ಟಿ ಕೇಂದ್ರಗಳನ್ನು ರಾಜ್ಯದಲ್ಲಿ ತೆರೆಯಲಾಗಿದೆ ಈಗ ರಾಜ್ಯದಲ್ಲಿ ಏಡ್ಸ್ ಬಾದಿತರಿಗೆ ಚಿಕಿತ್ಸೆ ನೀಡಲು ಒಟ್ಟು 12 ಕೇಂದ್ರಗಳು ಕಾರ್ಯನಿರ್ವಹಿಸುತ್ತಿದೆ ಈ ಕೇಂದ್ರಗಳ ಆರಂಭ HIV/AIDS ಬಾದಿತರ ಬದುಕಿನಲ್ಲಿ ಆಶಾಕಿರಣವಾಗಲಿದೆ ನ್ಯಾಕೊದಿಂದ ಇನ್ನು ನಾಲ್ಕು ಸಿಡಿ 4 ಯಂತ್ರಗಳನ್ನು ಸರಬರಾಜು ಮಾಡುತ್ತಿದ್ದಾರೆ
- ಅದೇ ರೀತಿಯಲ್ಲಿ ಹೆಚ್‌ಐವಿ ಸೋಂಕಿನೊಂದಿಗೆ ಜೀವಿಸುತ್ತಿರುವ ಮಕ್ಕಳಿಗಾಗಿ (15 ವರ್ಷಕ್ಕಿಂತ ಕೆಳಗಿನವರು) ಪ್ರಥಮ ಬಾರಿಗೆ ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಹಾಗೂ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಎಆರ್‌ಟಿ ಚಿಕಿತ್ಸೆ ಪ್ರಾರಂಭಿಸಲಾಗಿದೆ ಬರುವ ದಿನಗಳಲ್ಲಿ ಎಲ್ಲಾ ಎಆರ್‌ಟಿ ಕೇಂದ್ರಗಳಲ್ಲೂ ಈ ಸೇವೆಯನ್ನು ವಿಸ್ತರಿಸಲಾಗುವುದು ನ್ಯಾಕೋ ಮುಖಾಂತರ ಕ್ಲಿಂಟನ್ ಫೌಂಡೇಶನ್‌ನವರು ಔಷಧಿಗಳನ್ನು ಉಚಿತವಾಗಿ ನೀಡಿದ್ದಾರೆ ಯುನಿಸೆಫ್‌ನವರು ವಿವಿಧ ಹಂತಗಳಲ್ಲಿ ತರಬೇತಿ ನೀಡಲು ಸಹಾಯ ಮಾಡುತ್ತಿದ್ದಾರೆ
- ಹಾಗೆಯೇ ವಿಭಾಗೀಯ ಮಟ್ಟದಲ್ಲಿ ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಸೋಂಕಿತ ಮಕ್ಕಳಿಗಾಗಿ ಆರೈಕೆ ಮತ್ತು ಬೆಂಬಲ (ಎ ಆರ್ ಟಿ ಚಿಕಿತ್ಸೆ) ನೀಡುವ ಸೆಂಟರ್ ಆಫ್ ಎಕ್ಸೆಲೆನ್ಸ್ ಸಂಸ್ಥೆಯನ್ನು ತೆರೆಯಲು ನ್ಯಾಕೋದಿಂದ ಮಂಜೂರಾತಿ ದೊರೆತಿದೆ
- ಇವುಗಳ ಜೊತೆಗೆ ಸುರಕ್ಷಿತ ಕ್ರಮವಾಗಿ ಕಾಂಡೋಮ್ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಕಾಂಡೋಮ್ ಬಳಕೆ ಕೇವಲ ಸಂತಾನ ನಿಯಂತ್ರಣ ಸಾಧನವಾಗಿರದೇ HIV/AIDS ನಿಯಂತ್ರಣ ಸಾಧನವಾಗಿ ಉಪಯೋಗಿಸಬಹುದೆಂದು ಜನತೆಯಲ್ಲಿ ಅರಿವು ಮೂಡಿಸಲಾಗುತ್ತಿದೆ ಹಾಗೆಯೇ ನಿರೋಧ್‌ಗಳನ್ನು ವಿತರಿಸಲಾಗುತ್ತಿದೆ

• "ಅರಿವೇ ಗುರು" ಎಂಬಂತೆ, ಅರಿವು ಹಾಗೂ ಸೂಕ್ತ ಎಚ್ಚರಿಕೆಯೊಂದೇ ಏಡ್ಸ್‌ನ್ನು ತಡೆಗಟ್ಟಬಲ್ಲದು ಎಂಬ ಉದ್ದೇಶದಿಂದ ರಾಜ್ಯಾದ್ಯಂತ ವಿವಿಧ ಮಾಧ್ಯಮಮಗಳ ಮೂಲಕ HIV/AIDS ಕುರಿತ ಜಾಗೃತಿ ಕಾರ್ಯಕ್ರಮಗಳನ್ನು ಸಹ ತುಂಬಾ ತೀವ್ರವಾಗಿ ಕೈಗೊಳ್ಳಲಾಗಿದೆ

69 (219) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್ಬುರ್ಗ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು,

ಆ) ಇವುಗಳಿಗೆ ಯಾವ ಯಾವ ವರ್ಷದಲ್ಲಿ ಮಂಜೂರಾತಿಯನ್ನು ನೀಡಲಾಗಿದೆ ,

ಇ) ಇದನ್ನು ಯಾವ ಯಾವ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ ,

ಈ) ಇದಕ್ಕೆ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಒಪ್ಪಿಗೆ ಪಡೆಯಲಾಗಿದೆಯೇ ,

ಉ) 2004–05ರಿಂದ ಪ್ರಾರಂಭವಾದ ಹೊಸ ವೈದ್ಯಕೀಯ ಕಾಲೇಜುಗಳಿಗೆ. ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಸರ್ಕಾರವು ಒದಗಿಸಿದೆಯೇ ,

ಊ) ಇವುಗಳಲ್ಲಿ ವೈದ್ಯರು ಮತ್ತು ವೈದ್ಯಕೇತರ ಸಿಬ್ಬಂದಿಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ,

ಋ) ಇಲ್ಲವಾದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) 7

ಆ) ಬಿಎಂಸಿ ಬೆಂಗಳೂರು – 1924
ಎಂಎಂಸಿ ಮೈಸೂರು – 1955
ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ – 1997
ವಿಜಯನಗರ ವೈದ್ಯಕೀಯ ವಿಜ್ಞಾನಗಳ ನಂಸ್ಥೆ, ಬಳ್ಳಾರಿ – 1994
ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾವಿ – 2006
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ – 2006
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ – 2006

ಇ) ಬೆಂಗಳೂರು, ಮೈಸೂರು, ಧಾರವಾಡ, ಬಳ್ಳಾರಿ, ಬೆಳಗಾಂ, ಹಾಸನ ಮತ್ತು ಮಂಡ್ಯ

ಈ) ಹೌದು